**ದಿನಾಂಕ:21-01-2020 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ಪಾಟೀ ಸವಾಲು: ಪ್ರತಿವಾದಿ 1,3 ರಿಂದ 6 ರವರ ಪರ ಶ್ರೀ. ಬಿ.ಎಸ್.ಪಿ.,</u>**

**<u>ವಕೀಲರಿಂದ:</u>**

ನಾನು ಎಸ್.ಎಸ್.ಎಲ್.ಸಿ ವರೆಗೆ ಓದಿರುತ್ತೇನೆ. ನಾನು ಕೆ.ಎಸ್.ಆರ್.ಟಿ.ಸಿಯಲ್ಲಿ ನಿರ್ವಾಹಕನಾಗಿ ಚಿಕ್ಕಮಗಳೂರು ಮತ್ತು ಶಿವಮೊಗ್ಗದಲ್ಲಿ ಕೆಲಸ ಮಾಡಿ ಶಿವಮೊಗ್ಗದಲ್ಲಿ ಕೆಲಸ ಮಾಡುವಾಗ ನಿವೃತಿ ಹೊಂದಿರುತ್ತೇನೆ. 1 ನೇ ವಾದಿಯ ತಂದೆ ತಿಮ್ಮಶೆಟ್ಟಿಯವರಿಗೆ 4 ಜನ ಮಕ್ಕಳು ಅಂದರೆ 1 ನೇ ವಾದಿ ಮೂರ್ತಿ, 2 ನೇ ವಾದಿ ನಂದಗೋಪಾಲ ಹಾಗೂ ಸುವರ್ಣ ಮತ್ತು ಮಹಾಲಕ್ಷ್ಮೀ ಎಂದರೆ ಸರಿ. ಸದರಿ ಸುವರ್ಣ ಮತ್ತು ಮಹಾಲಕ್ಷ್ಮೀಯವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿಲ್ಲ ಎಂದರೆ ಸರಿ. ನನಗೆ ಶಾರದಮ್ಮ ಎಂಬ ಸಹೋದರಿ ಇದ್ದಾರೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಪಿ-2 ವಂಶವೃಕ್ಷದಲ್ಲಿ ಶಾರದಮ್ಮರವರನ್ನು ನನ್ನ ಸಹೋದರಿ ಎಂದು ತೋರಿಸಲಾಗಿದೆ ಎಂದರೆ ಸರಿ. 6 ನೇ ಪ್ರತಿವಾದಿ ಪುಟ್ಟಸ್ವಾಮಿ ರವರ ತಂದೆ ತಿಮ್ಮಶೆಟ್ಟಿರವರಿಗೆ ಇಬ್ಬರು ಹೆಂಡತಿಯರು ಎಂದರೆ ಸರಿ. ಸದರಿ ತಿಮ್ಮಶೆಟ್ಟಿಯವರಿಗೆ 5 ಜನ ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗ ಎಂದರೆ ಸರಿ. ಸದರಿ ತಿಮ್ಮಶೆಟ್ಟಿಯವರ 5 ಜನ ಹೆಣ್ಣು ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸದರಿ ತಿಮ್ಮಶೆಟ್ಟಿಯವರ ತಂದೆಯ ಹೆಸರು ಮರ್ಲೆ ತಿಮ್ಮಶೆಟ್ಟಿ ಎಂದರೆ ಸರಿ. ಸದರಿ ಮರ್ಲೆ ತಿಮ್ಮಶೆಟ್ಟಿಯವರಿಗೆ 4 ಜನ ಮಕ್ಕಳು ಎಂದರೆ ಸರಿ.

ದಾಸಶೆಟ್ಟಿ, ಹನುಮಂತ ಶೆಟ್ಟಿ, ವೆಂಕಟ ಶೆಟ್ಟಿ ಮತ್ತು ತಿಮ್ಮಶೆಟ್ಟಿ ರವರುಗಳು 1956 ನೇ ಇಸವಿಯಲ್ಲಿ ಅವರುಗಳ ಒಟ್ಟು ಕುಟುಂಬದ ಆಸ್ತಿಗಳನ್ನು ವಿಭಾಗಪತ್ರದ

ಮೂಲಕ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಕಡೂರಿನ ನ್ಯಾಯಾಲಯದಲ್ಲಿ ಗೌರಮ್ಮ ಎಂಬುವವರು ಅಸಲು ದಾವಾ ಸಂ.21/2016 ರಂತೆ ನನ್ನ ಮತ್ತು ನನ್ನ ಸಹೋದರರ ವಿರುದ್ದ ಒಂದು ದಾವೆ ದಾಖಲು ಮಾಡಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ನ್ಯಾಯಾಲಯಕ್ಕೆ ಹಾಜರಾಗಿರುತ್ತೇನೆ. ಲಕ್ಷ್ಮಮ್ಮ ಎಂಬುವವರು ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ಸಂ.37/19 ರಂತೆ ನನ್ನ ವಿರುದ್ದ ದಾವೆ ದಾಖಲು ಮಾಡಿದ್ದಾರೆ ಎಂದರೆ ಸರಿ. ಸದರಿ ದಾವೆಯಲ್ಲೂ ಸಹ ನಾನು ಹಾಜರಾಗಿರುತ್ತೇನೆ.

ನಾನು ಈಗ ಬೆಂಗಳೂರಿನಲ್ಲಿ ವಾಸವಿದ್ದೇನೆಂದರೆ ಸರಿ. ನನಗೆ ಬೆಂಗಳೂರಿನಲ್ಲಿ ಸ್ವಂತ ಮನೆ ಇದೆ ಎಂದರೆ ಸರಿಯಲ್ಲ. ಎಸ್.ಬಿದರೆ ಗ್ರಾಮದಲ್ಲಿರುವ ನನ್ನ ಆಸ್ತಿಗಳನ್ನು ನನ್ನ ಸಂಬಂಧಿಯಾದ ರಂಗಶೆಟ್ಟಿ ಎಂಬುವವರು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ನನ್ನ ಸಂಬಂಧಿ ರಂಗಶೆಟ್ಟಿಯ ಮಗನಿಗೆ ನನ್ನ ಮಗಳನ್ನು ಕೊಟ್ಟು ವಿವಾಹ ಮಾಡಿದ್ದೇನೆಂದರೆ ಸರಿ. ದಾವಾ ಆಸ್ತಿಯು 1985-86 ರಲ್ಲಿ ತಿಮ್ಮಶೆಟ್ಟಿಯವರಿಗೆ 17 ಗುಂಟೆ ಮತ್ತು ವೆಂಕಟಶೆಟ್ಟಿಯವರಿಗೆ 17 ಗುಂಟೆ ಖಾತೆ ವರ್ಗಾವಣೆಯಾಗಿದೆ ಎಂದರೆ ಸಾಕ್ಷಿಯು ನನಗೆ ತಿಳಿಯದ ಹಾಗೆ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. 6 ನೇ ಪ್ರತಿವಾದಿಯ ತಂದೆ ತಿಮ್ಮಶೆಟ್ಟಿ 2000 ನೇ ಸಾಲಿನಲ್ಲಿ ತೀರಿಕೊಂಡಿದ್ದಾರೆ ಎಂದರೆ ಸರಿ. ಸದರಿ ತಿಮ್ಮಶೆಟ್ಟಿ ತೀರಿಕೊಂಡ ನಂತರ ಖಾತೆಯು 6 ನೇ ಪ್ರತಿವಾದಿಯ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ. 1956 ರಿಂದಲೂ ಸಹ 6 ನೇ ಪ್ರತಿವಾದಿಯ ತಂದೆ ತಿಮ್ಮಶೆಟ್ಟಿಯವರು ಹಾಗೂ ವೆಂಕಟಶೆಟ್ಟಿಯವರು ದಾವಾ ಆಸ್ತಿಯ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. 1986 ರಿಂದ 6 ನೇ ಪ್ರತಿವಾದಿ ಪುಟ್ಟಸ್ವಾಮಿ ದಾವಾ ಆಸ್ತಿಯ ಪೈಕಿ 17 ಗುಂಟೆಯಲ್ಲಿ ಸ್ವಾಧೀನಾನುಭವ ಇದ್ದಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾವು ಯಾವತ್ತು ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ.

**O.S.172/2018 ಪಿ.ಡಬ್ಲ್ಯೂ:1**

ನಾನು ಪೊಲೀಸ್ ಠಾಣೆಗೆ ದೂರು ನೀಡಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಪೊಲೀಸರು ದೂರು ತೆಗೆದುಕೊಳ್ಳದೆ ನ್ಯಾಯಾಲಯಕ್ಕೆ ಹೋಗುವಂತೆ ಸೂಚಿಸಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಸ್ವಾಧೀನ ಹೊಂದಿಲ್ಲದಿದ್ದರೂ ಸಹ ಅಕ್ರಮ ಲಾಭಪಡೆಯುವ ಸಲುವಾಗಿ ಸುಳ್ಳು ದಾವೆ ದಾಖಲಿಸಿದ್ದೇನೆಂದರೆ ಸರಿಯಲ್ಲ. ನನ್ನ ಅಜ್ಜನ ಹೆಸರು ತಿಮ್ಮಶೆಟ್ಟಿ ಇದ್ದು 6 ನೇ ಪ್ರತಿವಾದಿಯ ತಂದೆಯ ಹೆಸರು ತಿಮ್ಮಶೆಟ್ಟಿ ಇರುವ ಕಾರಣ ದಾವಾ ಆಸ್ತಿಯನ್ನು ಕಬಳಿಸುವ ಸಲುವಾಗಿ ಸುಳ್ಳು ದಾವೆ ದಾಖಲು ಮಾಡಿದ್ದೇನೆಂದರೆ ಸರಿಯಲ್ಲ. ವಂಶವೃಕ್ಷದಲ್ಲಿ ತೋರಿಸಿರುವ ಎಲ್ಲರನ್ನು ಪಕ್ಷಗಾರರನ್ನಾಗಿ ಮಾಡದೆ ಸುಳ್ಳು ಪ್ರಮಾಣಪತ್ರ ಸಲ್ಲಿಸಿದ್ದೇನೆಂದರೆ ಸರಿಯಲ್ಲ. ನಮಗೆ ದಾವಾ ಆಸ್ತಿಯ ಮೇಲೆ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

(ದೀಪು ಎಂ.ಟಿ.)
3 ನೇ.ಹೆ.ದಿ.ನ್ಯಾ.& ಪ್ರ:ದ:ನ್ಯಾ:ದಂ.,ರವರು,
ಕಡೂರು.